O.S. 10/2016
P.W.1

**ಸಾಕ್ಷಿಯನ್ನು ದಿನಾಂಕಃ 23-08-2024 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಪಾಟೀ ಸವಾಲು ಪ್ರತಿವಾದಿ ಪರ ವಕೀಲರವರಿಂದಃ**

ದಾವಾ ಹೊಲ ಈಗ ನಮ್ಮ ಸ್ವಾಧೀನದಲ್ಲಿರುವುದು. ದಿಃ 18.12.2012 ರಿಂದ ನಾವು ಖರೀದಿ ಮಾಡಿದ ದಿನದಿಂದ ಇಂದಿನವರೆಗೂ ನಮ್ಮ ಸ್ವಾಧಿನಲ್ಲಿರುತ್ತದೆ. ನಾವು ರೂ.3,00,000/- ಕ್ಕೆ ಖರೀದಿ ಮಾಡಿದ್ದು ಈಗಾಗಲೆ ರೂ. 2,10,000/- ಯನ್ನು ಕೊಟ್ಟಿದ್ದೇವೆ. ನಾವು ಈಗ ಜಮೀನಿಂದ ಬೆಳೆಯನ್ನು ತೆಗೆದುಕೊಳ್ಳುತ್ತಿಲ್ಲ, ಕಾರಣ ಪ್ರತಿವಾದಿಗಳು ಬಂದು ಜಗಳ ಮಾಡುತ್ತಿರುವುದು. ನಾವು 2012 ನೇ ಸಾಲಿನಿಂದ ಜಮೀನಿಂದ ಯಾವುದೇ ಉತ್ಪನ್ನ ಮತ್ತು ಬೆಳೆಯನ್ನು ತೆಗೆದುಕೊಂಡಿರುವುದಿಲ್ಲ. ನಾವು ಪ್ರತಿವಾದಿಗಳಿಂದ ಕಂಡಿತ ಖರೀದಿ ದಾಖಲೆಯನ್ನು ಬರೆಸಿಕೊಂಡಿದ್ದೇವೆ. ದಾವಾ ಜಮೀನು ನಾವು ಖರೀದಿ ಮಾಡಿಕೊಂಡ ಕಾಲಕ್ಕೆ ಎಕರೆಗೆ 1 ½ ಲಕ್ಷ ಬಾಳುತ್ತಿತ್ತು. ಖರೀದಿ ಮಾತುಕತೆಯನ್ನು ಉಪನೊಂದಣಿ ಕಛೇರಿಯಲ್ಲಿ ಮಾಡಿದೆವು. ಆ ಸಮಯದಲ್ಲಿ ಎಂ. ಮಂಜುನಾಥ, ಎಂ.ಬಸವರಾಜ, ಎಂ.ರವಿಕುಮಾರ್ ಹಾಗೂ ಅವರ ತಾಯಿ ಮಲ್ಲಮ್ಮ ಇದ್ದರು. ಸದರಿ ಮಾತುಕತೆ 2012 ಡಿಸೆಂಬರ್ 18 ರಂದು ನಡೆಯಿತು. ಸಮಯ ನನಗೆ ನೆನಪಿಲ್ಲ. ಮಾತುಕತೆ ಕಾಲಕ್ಕೆ ಯಾವುದೇ ಚೌಕಾಸಿ ಮಾಡಿರುವುದಿಲ್ಲ 3 ಲಕ್ಷಕ್ಕೆ ವ್ಯವಹಾರ ಮುಗಿಸಿರುತ್ತೇವೆ.

ನಮ್ಮೂರು ಹೊಳೆಯ ದಂಡೆಯ ಮೇಲಿದೆ ಎಂದರೆ ಸರಿ. ಅಲ್ಲಿಯ ಜಮೀನುಗಳು ಈಗ 20 ರಿಂದ 30 ಲಕ್ಷದವರೆಗೆ ಬಾಳುತ್ತವೆ ಎಂದರೆ ನನಗೆ ಗೊತ್ತಿಲ್ಲ. 2012 ನೇ ಸಾಲಿನಲ್ಲಿ ಎಕರೆಗೆ 15 ಲಕ್ಷ ಬಾಳುತ್ತಿತ್ತು ಎಂದರೆ ಸರಿಯಲ್ಲ. ಪ್ರತಿವಾದಿಗಳು ನನ್ನಿಂದ ರೂ.1,00,000/- ವನ್ನು ಸಾಲವಾಗಿ ಪಡೆದಿದ್ದು ಅದರ ಭದ್ರತೆಗಾಗಿ ಖೀರಿದಿ ಒಪ್ಪಂದ ಪತ್ರ ಬರೆದುಕೊಟ್ಟಿರುವರು ಎಂದರೆ ಸರಿಯಲ್ಲ. ಸದರಿ ಖರೀದಿ ಒಪ್ಪಂದ ದಾಖಲೆಯಲ್ಲಿ ಯಾವುದೇ ವ್ಯವಹಾರ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ಹಣವನ್ನು ನಾನು ಯಾವ ರೀತಿಯಾಗಿ ಪಾವತಿ ಮಾಡಿದ್ದೇನೆ ಎಂದು ನನಗೆ ಈಗ ನೆನಪಿಲ್ಲ. ನಾನು ಹಣವನ್ನು ಮಲ್ಲಮ್ಮ ಹಾಗೂ ಒಟ್ಟು ನಾಲ್ಕು ಜನರ ಕೈಯಲ್ಲಿ ಕೊಟ್ಟಿದ್ದೇನೆ. ದಾವಾ ಜಮೀನು ನನ್ನ ಸ್ವಾಧೀನದಲ್ಲಿರುವುದಿಲ್ಲ ಎಂದರೆ ಸರಿಯಲ್ಲ. ಅದು ಪ್ರತಿವಾದಿಗಳ ಸ್ವಾಧೀನದಲ್ಲಿರುವುದು ಎಂದರೆ ಸರಿಯಲ್ಲ. ನನ್ನ ಗಂಡ ಪೋಲಿಸ್ ಇಲಾಖೆಯಲ್ಲಿರುವ ಕಾರಣ ನಾನು ದೌರ್ಜನ್ಯದಿಂದ ಸ್ವಾಧೀನ ಪಡೆಯಲು ಪ್ರಯತ್ನ ಪಡುತ್ತಿದ್ದೇನೆ ಎಂದರೆ ಸರಿಯಲ್ಲ. ಆ ವಿಚಾರವಾಗಿ 1 ನೇ ಪ್ರತಿವಾದಿ ದಾವೆಯನ್ನು ಓ ಎಸ್ ನಂ.70/2016 ರಂತೆ ಸಲ್ಲಿಸಿರುವರು ಎಂದರೆ ಅದು ಸುಳ್ಳು ದಾವೆಯಾಗಿರುತ್ತದೆ.

ನಾನು 2014 ರಲ್ಲಿ ಪ್ರತಿವಾದಿಗಳಿಗೆ ನೋಟಿಸನ್ನು ಕಳುಹಿಸಿದ್ದೇನೆ. ಆದರೆ ಅವರು ಉತ್ತರವನ್ನು ನೀಡಿರುವುದಿಲ್ಲ. ಪ್ರತಿವಾದಿಗಳು ಉತ್ತರವನ್ನು ನೀಡಿರುವರು ಎಂದರೆ ಸರಿಯಲ್ಲ. ಸದರಿ ಉತ್ತರದಲ್ಲಿ ಸಾಲದ ಹಣವನ್ನು ಪಡೆದುಕೊಂಡ ಕುರಿತು ಹಾಗೂ ಮರುಪಾವತಿ ಮಾಡಲು ತಯಾರು ಇರುವ ಕುರಿತು ಉಲ್ಲೇಖಿಸಿರುವರು ಎಂದರೆ ಸರಿಯಲ್ಲ. ಈಗಲೂ ಕೂಡ ಪ್ರತಿವಾದಿಯರು ನಾನು ನೀಡಿದ ಸಾಲದ ಹಣವನ್ನು ಮರುಪಾವತಿ ಮಾಡಲು ರೆಡಿ ಇರುವರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಖರೀದಿ ದಾಖಲೆ ಬರೆದುಕೊಟ್ಟಿರುವ ಕಾರಣ ಆ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ನುಡಿದರು. ಊರ ಹಿರಿಯರ ಮುಖಾಂತರ ಪ್ರತಿವಾದಿಯರು ಸಾಲವನ್ನು ನನಗೆ ಮರುಪಾವತಿ ಮಾಡಿಸಲು ಪ್ರಯತ್ನ ಪಟ್ಟರು ಎಂದರೆ ಸರಿಯಲ್ಲ.

1 ನೇ ಪ್ರತಿವಾದಿಗೆ ಮೂರು ಜನ ಮಕ್ಕಳು. ಅವರಿಗೆ 4 ಜನ ಮಕ್ಕಳು ಎಂದರೆ ಸರಿಯಲ್ಲ. ಆಕೆಗೆ ಚಂದ್ರಮ್ಮ, ಮಂಜುನಾಥ, ಬಸವರಾಜ, ರವಿ ಎಂಬ ನಾಲ್ಕು ಜನ ಮಕ್ಕಳಿರುವರು ಎಂದರೆ ಸರಿ. ದಾವಾ ಹೊಲದಲ್ಲಿ ಎಲ್ಲರಿಗೂ ಹಕ್ಕು ಇದೆ ಎಂದರೆ ನನಗೆ ಗೊತ್ತಿಲ್ಲ. ನಿಜವಾಗಿಯೂ ಖರೀದಿ ಮಾಡುವ ಸಾಲುವಾಗಿ ದಾಖಲೆಯನ್ನು ಬರೆಸಿಕೊಂಡಿದ್ದರೆ ಎಲ್ಲಾ ಮಕ್ಕಳಿಂದ ಸಹಿಯನ್ನು ತೆಗೆದುಕೊಳ್ಳುತ್ತಿದ್ದೇನು ಆದರೆ ಇದು ಕೇವಲ ಭದ್ರತೆಗಾಗಿ ತೆಗೆದುಕೊಂಡ ಕಾರಣ ಬೇರೆ ಮಕ್ಕಳನ್ನು ಸೇರಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರಾಗಿರುವ ದ್ಯಾನಪ್ಪ ಇವರು ನನಗೆ ತಮ್ಮನಾಗಬೇಕು. ಮತ್ತೊಬ್ಬ ಸಾಕ್ಷಿದಾರರಾದ ಎಂ.ಕರಿಬಸಯ್ಯ ಇವರು ಪತ್ರ ಬರಹಗಾರರಾಗಿದ್ದು ಹರಪನಹಳ್ಳಿಯಲ್ಲಿ ವಾಸವಿರುವರು. ನಿಪಿ-1 ದಾಖಲೆಯನ್ನು ಕರಿಬಸಯ್ಯ ಎಂಬ ಪತ್ರ ಬರಹಗಾರರು ಬರೆದಿರುವರು. ನನ್ನ ತಮ್ಮನನ್ನು ಹೊರತುಪಡಿಸಿ ನಿಪಿ-1 ದಾಖಲೆಗೆ ಬೇರೆಯವರು ಸಾಕ್ಷಿ ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಹಾಗೂ ನನ್ನ ಅಣ್ಣನ ಮೇಲೆ ಪೋಲಿಸ್ ದೂರು ಹಾಕಲಾಗಿದೆ ಎಂದರೆ ಅದು ಸುಳ್ಳು ದೂರು ಆಗಿರುವುದು. ನಾನು ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**